ಆ) ಹೌದು

ಇ) ಹೌದು

ಈ) ಮೂಲಭೂತ ಸೌಕರ್ಯಗಳಾದ ಮಾರಾಟಕಟ್ಟೆಗಳ ನಿರ್ಮಾಣ ಬೀದಿದೀಪಗಳ ಅಳವಡಿಕೆ, ನೀರು ಸರಬ್ಬರಾಜು, ಶೌಚಾಲಯ ನಿರ್ಮಾಣ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಗ್ರಾಮೀಣ ಸಂತೆಗಳಲ್ಲಿ ಅವಶ್ಯಕತೆಗನುಸಾರ ಹಂತ ಹಂತವಾಗಿ ಒದಗಿಸಲು ಕ್ರಮ ಜರುಗಿಸಲಾಗುತ್ತಿದೆ

ಉ) ರಾಜ್ಯದಲ್ಲಿ 737 ಗ್ರಾಮೀಣ ಸಂತೆಗಳು ಇವೆ

162 (425) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,





163 (426)\ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ

ಅ) ಟಾಸ್ಕ್‌ಫೋರ್ಸ್ ಮೂಲಕ ಕರ್ನಾಟಕ ರಾಜ್ಯಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಕೊಳವೆ ಬಾವಿಗಳನ್ನು ಕೊರೆಸಲು ಬಿಡುಗಡೆಯಾಗಿರುವ ಹಣವೆಷ್ಟು ,

ಆ) ಬಾಕಿ ನೀಡಬೇಕಾಗಿರುವ ಹಣವೆಷ್ಟು ,

ಇ) ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ರಾಜ್ಯಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಹಾಹಾಕಾರ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)

ಅ) 2006–07ರ ಸಾಲಿನಲ್ಲಿ ಟಾಸ್ಕ್‌ಫೋರ್ಸ್ ವತಿಯಿಂದ ಅನುಷ್ಠಾನಗೊಳಿಸಿರುವ ತುರ್ತು ಕುಡಿಯುವ ನೀರಿನ ಕಾಮಗಾರಿಗಳಿಗಾಗಿ ಒಟ್ಟು ರೂ 31 62 ಕೋಟಿ ಅನುದಾನ ಬಿಡುಗಡೆಯಾಗಿದೆ

ಆ) ಇನ್ನೂ ಸುಮಾರು ರೂ 63 00 ಕೋಟಿ ಅನುದಾನದ ಬೇಡಿಕೆಯಿದೆ

ಇ) ಬಂದಿದೆ ಈ ಸಂಬಂಧ ರೂ 116 34 ಕೋಟಿ ಅಂದಾಜಿನ ತುರ್ತು ಕ್ರಿಯಾ ಯೋಜನೆಯನ್ನು ಚಮರಾಜನಗರ ಜಿಲ್ಲೆಯ 118 ಸಮಸ್ಯಾತ್ಮಕ ಜನವಸತಿಗಳೂ ಸೇರಿದಂತೆ ರಾಜ್ಯದ ಎಲ್ಲಾ ತಾಲ್ಲೂಕುಗಳ